ಹಿಂದುಳಿದವರನ್ನು ವಿಶೇಷ ವರ್ಗದವರನ್ನು ಎಷ್ಟೆಷ್ಟು ತೆಗೆದುಕೊಳ್ಳಬೇಕಾಗಿತ್ತೊ ಅಷ್ಟನ್ನು ತೆಗೆದು ಕೊಳ್ಳದಿರುವುದು ಆಯ್ಕೆ ಸಮಿತಿಗಳಲ್ಲಿ ಕಂಡುಬಂದಿದೆ. ಆದ್ದರಿಂದ, ಈ ಸಂದರ್ಭದಲ್ಲಿ ಸರ್ಕಾರ ಸ್ಪಷ್ಟವಾಗಿ ಹೇಳಬೇಕು, ಹಾವನೂರ್ ವರದಿಯ ಪ್ರಕಾರ ಆಯ್ಕೆ ಮಾಡಬೇಕೆಂದು ಸರ್ಕಾರ ಸೂಚನೆ ನೀಡಿದೆಯೋ ಇಲ್ಲವೋ ?

ಶ್ರೀಮತಿ ಮನೋರಮಾ ಮಧ್ವರಾಜ್ —ಸರ್ಕಾರದ ಆದೇಶದ ಪ್ರಕಾರ ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಗಂಗಾಧರನ್ —ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ, ಆರ್ಥಿಕವಾಗಿ ಹಿಂದುಳಿದವರನ್ನು ಪರಿಗಣನೆ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಆದರೆ ತಾವು ಆರ್ಥಿಕವಾಗಿ ಹಿಂದುಳಿದವರಿಗೆ ಆಧ್ಯತೆ ಕೊಡುವುದಿಲ್ಲವೆಂದು ಉತ್ತರಿಸಿದ್ದೀರಿ. ಆದ್ದರಿಂದ, ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಆರ್ಥಿಕವಾಗಿ ಹಿಂದುಳಿದವರಿಗೂ ಸಹ ಸಹಾಯ ಮಾಡುವ ರೀತಿಯಲ್ಲಿ ವರದಿಯನ್ನು ರೂಪಿಸಲು ಪ್ರಯತ್ನಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಆನಂದರಾಯರು ಎಲ್ಲಾ ಜಾತಿಯನ್ನು ಬ್ರಾಹ್ಮಣ ಜಾತಿ ಎಂದು ಪರಿಗಣಿಸುತ್ತೀರಾ ಎಂದು ಕೇಳಿದರು. ಅವರು ಹಿಂದೆ ಎಲ್ಲರನ್ನೂ ಬಾಹ್ಮಣರನ್ನಾಗಿ ಮಾಡಬೇಕು ಎಂದು ವಿರೋಧಪಕ್ಷದಿಂದ ಆಡಳಿತ ಪಕ್ಷಕ್ಕೆ ಬಂದಿದ್ದರು. ಅದು ನಡೆಯಲಿಲ್ಲ. ಆದಕ್ಕೆ ಪುನಃ ವಾಪಸ್ ಆ ಕಡೆ ಹೋಗಿದ್ದಾರೆ. ಅವರು ಮತ್ತೆ ಏನಾದರೂ ಈ ಕಡೆ ಬಂದಾಗ ತಮ್ಮ ವಿಷಯವನ್ನು ಯೋಚನೆ ಮಾಡಲಿ. ಈಗ ಸದ್ಯಕ್ಕೆ ಅದು ಬೇಡ.

ಶ್ರೀ ಮಳ್ಳೂರು ಆನಂದರಾವ್. —ನಾನು ಆ ಕಡೆ ಬಂದರೆ ಎಲ್ಲಾ ಜಾತಿಗಳನ್ನೂ ಮುಂದುವರಿದ ಜನಾಂಗ ಎಂದು ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಈಗ ನಿಮ್ಮ ಅವಶ್ಯಕತೆ ಇಲ್ಲ. ಅಂಥ ಕಾಲ ಬಂದಾಗ ನೋಡೋಣ.

Selection of Primary School Teachers in Education Department.

195. SRI PRABHAKAR KOTEKAR (Chaittapur).—Will the Minister for Education be pleased to state—

(*a*) whether the District Level Recruitment Committees, with non-official members, for appointing teachers under the Education Department have been dissolved,

(*b*) if so, the reasons for the same,

(*c*) whether the Government has consitituted new Committees in place of D.L.R.Cs, with only Government Officials as its members,

(*d*) if so, whether these new D. L. R. Cs. with only Government Officials have selected teachers (particulars of selection in each District be furnished) :

(*e*) whether the Government is constituing the new D. L. R. Cs. with only Government Officials in future also ?

SRI G. B. SHANKARA RAO (Minister for Education).—

(*a*) No

(*b*) Does not arise in view of the answer to (*a*).

(*c*) No

(*d*) and (*c*) Does not arise.

SRI PRABHAKAR TELKAR : In your reply, you have stated that the District Level Recruitment Committees consisting of non-official members for appointing teachers under the Education Department have not been dissolved. But no recruitment committee is working. I think the Government is aware that there are several vacancies of teachers to be filled in and for want of selection of these teachers, there are so many schools without teachers. Therefore, what steps the Government would like to take in this behalf ?

ಶ್ರೀ ಜಿ ಬಿ ಶಂಕರರಾವ್. ಎಲ್ಲಾ ನೇಮಕಾತಿ ಸಮಿತಿಗಳನ್ನೂ ರದ್ದುಗೊಳಿಸಿಲ್ಲ. ಕೆಲವು ಸಮಿತಿಗಳು ತೃಪ್ತಿಕರವಾಗಿ ಕೆಲಸ ಮಾಡದಿರುವುದು ಕಂಡುಬಂದುದರಿಂದ ಜೂನ್ ತಿಂಗಳಲ್ಲಿ ಆದೇಶ ಕೊಟ್ಟು ಕೆಲಸಕಾರ್ಯಗಳನ್ನು ಮುಂದುವರೆಸಬಾರದು ಎಂದು ಹೇಳಿದ್ದೇವೆ. ಮೇ ತಿಂಗಳಿನಿಂದ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತದೆ, ಅಷ್ಟೊರೊಳಗೆ ನೇಮಕಾತಿ ಸಮಿತಿಗಳನ್ನು ರಚಿಸತಕ್ಕ ಆಲೋಚನೆ ಸರ್ಕಾರಕ್ಕಿದೆ. ಶಿಕ್ಷಣಕ್ಕೆ ಯಾವ ರೀತಿಯ ತೊಂದರೆ ಆಗದ ರೀತಿಯಲ್ಲಿ ಸಮಿತಿಗಳನ್ನು ರಚಿಸಿ ನೇಮಕಾತಿಗಳನ್ನು ಮಾಡಲುವುದಕ್ಕೆ ಆದೇಶವನ್ನು ಕೊಡುತ್ತೇವೆ. ಎಲ್ಲ ನೇಮಕಾತಿ ಸಮಿತಿಗಳನ್ನು ರದ್ದುಗೊಳಿಸುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎ ಜಿ. ಕೊಡಗಿ.— ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಎಲ್ಲಾ ನೇಮಕಾತಿ ಸಮಿತಿಗಳನ್ನೂ ರದ್ದುಗೊಳಿಸಿಲ್ಲ, ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ ಇದೇ ಸದನದಲ್ಲಿ ಒಂದೆ ಮಾತನಾಡುವಾಗ ಶಿಕ್ಷಣ ನೇಮಕಾತಿ ಸಮಿತಿಯನ್ನು ರದ್ದುಪಡಿಸಿ ಹೊಸ ನೇಮಕಾತಿ ಸಮಿತಿಯನ್ನು ರಚನೆ ಮಾಡುವ ಆಲೋಚನೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಮೇಲ್ಮನೆಯಲ್ಲೂ ಕೂಡ ಹೊಸ ನೇಮಕಾತಿ ಸಮಿತಿಯನ್ನು ನಾವು ಮಾಡುವುದರಲ್ಲಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ ಮಾನ್ಯ ಮಂತ್ರಿಗಳ ಈಗಿನ ಉತ್ತರವನ್ನು ನೋಡಿದರೆ ವಿರೋಧಾಭಾಸವಾಗುವುದಿಲ್ಲವೇ? ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ನೇಮಕಾತಿ ಸಮಿತಿಗಳು ಸ್ಥಾಪನೆಯಾಗಿ ೬-೭ ತಿಂಗಳಿನಿಂದ ಇಡೀ ರಾಜ್ಯದಲ್ಲಿ ಅಧ್ಯಾಪಕರ ನೇಮಕಾತಿಗಳಿಗೆ ಸಂದರ್ಶನಗಳನ್ನು ಮಾಡಿ, ಆಯ್ಕೆ ಪಟ್ಟಿಯನ್ನು ತಯಾರು ಮಾಡಿ ಇಟ್ಟಿದ್ದಾರೆ. ಶಿಕ್ಷಣ ವರ್ಷ ಕೊನೆಗೊಳ್ಳುವುದಕ್ಕೆ ಕೇವಲ ಇನ್ನೂ ಒಂದು ತಿಂಗಳು ಉಳಿದಿದೆ. ಈಗ ಸಮಿತಿಗಳನ್ನು ರಚಿಸಿ ನೇಮಕಾತಿ ಮಾಡಬೇಕಾದರೆ ಇನ್ನೂ ಒಂದು ವರ್ಷವಾದರೂ ಬೇಕಾಗುತ್ತದೆ. ಹೀಗಾದರೆ ಈ ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳ ಗತಿ ಏನು ಮತ್ತು ವಿದ್ಯಾರ್ಥಿಗಳ ಪರಿಸ್ಥಿತಿ ಏನು ?

ಶ್ರೀ ಜಿ. ಬಿ. ಶಂಕರರಾವ್.— ನಾನು ಹೇಳಿರುವ ಉತ್ತರ ಸಮರ್ಪಕವಾಗಿದೆ. ಈಗಿರತಕ್ಕ ನೇಮಕಾತಿ ಸಮಿತಿಗಳನ್ನು ರದ್ದುಗೊಳಿಸಿಲ್ಲ. ನಾವು ಪುನರ್‌ರಚಿಸಬೇಕಾಗಿದೆ. ಇದರಲ್ಲಿ ವಿರೋಧಾಭಾಸ ವಿನೂ ಇಲ್ಲ. ಕೆಲವು ಸಮಿತಿಗಳ ಕಾರ್ಯ ತೃಪ್ತಿಕರವಾಗಿಲ್ಲ, ಅಸಮರ್ಪಕವಾಗಿದೆ ಎಂದು ಖಾಸಗೀ ಸದಸ್ಯರಿಂದ, ಕ್ಷೇತ್ರದ ಜನರಿಂದ ದೂರುಗಳು ಸರ್ಕಾರಕ್ಕೆ ಬಂದಿವೆ. ಆದ್ದರಿಂದ ಆ ಸಮಿತಿಗಳನ್ನು ಪುನರ್‌ರಚಿಸತಕ್ಕ ಆಶಯ ನಮಗಿದೆ. ಮಾನ್ಯ ಸದಸ್ಯರಾದ ಕೊಡಗಿಯವರು ಶಿಕ್ಷಣ ಸಂಸ್ಥೆಗಳಿಗೆ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ನಾನೂ ಒಪ್ಪುತ್ತೇನೆ. ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಹೊತ್ತಿಗೆ ನೇಮಕಾತಿ ಸಮಿತಿಗಳನ್ನು ಪುನರ್‌ರಚಿಸಿ ಕೆಲಸ ತೃಪ್ತಿಯಾಗುವ ರೀತಿಯಲ್ಲಿ ಮಾಡಿಸಿದರೆ ಜೊತೆಗೆ ಯಾವ ಯಾವ ಶಾಲೆಗಳಿಗೆ ಶಿಕ್ಷಕರ ಅವಶ್ಯಕತೆ ಇದೆಯೋ ಆ ಶಾಲೆಗಳಿಗೆ ಸಮಿತಿಗಳ ಮೂಲಕ ಶಿಕ್ಷಕರನ್ನು ಒದಗಿಸುವುದಕ್ಕೆ ಸರ್ಕಾರ ಆದೇಶ ಕೊಡುತ್ತದೆ. ಈ ಉತ್ತರದಿಂದ ಮಾನ್ಯ ಸದಸ್ಯರಿಗೆ ತೃಪ್ತಿಯಾಗುತ್ತದೆಂದು ತಿಳಿದುಕೊಂಡಿದ್ದೇನೆ.

ಶ್ರೀ ಎ. ರಾಮಚಂದ್ರ.— ಸರ್ಕಾರ ಜಿಲ್ಲಾಪಟ್ಟಿರ ನೇಮಕಾತಿ ಸಮಿತಿಗಳನ್ನು ರಚನೆ ಮಾಡಿದೆ. ಉಪಾಧ್ಯಾಯರ ಹುದ್ದೆಗೆ ರಾಜ್ಯದಲ್ಲಿ ಯಾವ ಜಿಲ್ಲೆಗೆ ಬೇಕಾದರೂ ಅರ್ಜಿ ಹಾಕಿಕೊಂಡು ಹೋಗಬಹುದು ಎಂಬ ನಿಯಮ ಇದೆ. ಬೆಳಗಾಂ, ಧಾರವಾಡ, ಬಿಜಾಪುರ, ಗುಲ್ಬರ್ಗ ಮುಂತಾದ ಕಡೆಗಳಿಂದ

ದಕ್ಷಿಣ ಕನ್ನಡ ಜಿಲ್ಲೆಗೆ ಬಂದವರು ಇದ್ದಾರೆ. ಸ್ವಲ್ಪ ಇದರಲ್ಲಿ ಕಾನೂನು ತಿದ್ದುಪಡಿ ಮಾಡಿ ಆಯಾ ಜಿಲ್ಲೆಯವರನ್ನು ಆಯಾ ಜಿಲ್ಲೆಯಲ್ಲೇ ನೇಮಕಾತಿ ಸಮಿತಿಗಳಲ್ಲಿ ಆಯ್ಕೆ ಮಾಡುವಂತೆ ವ್ಯವಸ್ಥೆ ಮಾಡಬೇಕಾಗಿ ವಿನಂತಿ.

ಶ್ರೀ ಜಿ. ಬಿ. ಶಂಕರರಾವ್.—ಹಾಗೆ ಮಾಡುವುದು ಕಷ್ಟವಾಗುತ್ತದೆ. ಕೆಲಸ ಬೇಕಾದವರು ಕರ್ನಾಟಕ ರಾಜ್ಯದಲ್ಲಿ ಎಲ್ಲಿ ಕೆಲಸ ಸಿಗುತ್ತದೋ ಅಲ್ಲಿ ಅರ್ಜಿ ಹಾಕಿಕೊಳ್ಳಬಹುದು. ಈಗ ಓದಿದ ತರುಣರ ಸಂಖ್ಯೆ ಜಾಸ್ತಿಯಾಗಿದ್ದು ಕೆಲಸಗಳಿಗೆ ಬಹಳ ಬೇಡಿಕೆ ಇದೆ. ಮಾನ್ಯ ಸದಸ್ಯರು ಹೇಳಿದಂತೆ ನಿಯಮಗಳನ್ನು ಮಾಡುವುದು ಕಷ್ಟವಾಗುತ್ತದೆ.

ಶ್ರೀ ಪ್ರಭಾಕರ್ ತೇಲ್ಕರ್.—ಮುಂದೆ ಸಮಿತಿಗಳನ್ನು ಪುನರ್‌ರಚಿಸುವಾಗ ನಾನ್-ಆಫಿಷಿಯಲ್ಸ್ ಸದಸ್ಯರನ್ನು ಹಾಕಬೇಕೆಂದಿದ್ದೀರೋ ಅಥವಾ ಬೇರೆ ರೀತಿಯ ಸಮಿತಿಯನ್ನು ಮಾಡಬೇಕೆಂದು ಇದ್ದೀರೋ ? ಸಮಿತಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಕಾರಣದಿಂದ ಹೊಸ ಸಮಿತಿಗಳನ್ನು ಮಾಡಬೇಕೆಂದಿದ್ದೀರಿ. ಆದ್ದರಿಂದ ಯಾವ ರೀತಿಯ ಸಮಿತಿಗಳನ್ನು ಮಾಡಬೇಕೆಂದಿದ್ದಿರಿ ಎಂಬುದನ್ನು ದಯವಿಟ್ಟು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.—ನಾವು ಇನ್ನೂ ಆಲೋಚನೆ ಮಾಡುತ್ತಿದ್ದೇವೆ. ಸ್ವಚ್ಛವಾದ ಜನ ಯಾರು ಸಿಗುತ್ತಾರೋ ಎಂಬುದನ್ನು ನೋಡಿ ಅವರನ್ನು ಸದಸ್ಯರನ್ನಾಗಿ ನೇಮಿಸಬೇಕೆಂಬುದು ಸರ್ಕಾರದ ಪರಿಶೀಲನೆಯಲ್ಲಿದೆ. ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಈ ಬಗ್ಗೆ ನಿರ್ಣಯ ತೆಗೆದು ಕೊಳ್ಳುತ್ತೇವೆ.

ಶ್ರೀ ರಾಮಭಟ್.—ನಮ್ಮ ಕ್ಷೇತ್ರದಲ್ಲಿ ಕೆಲವು ಅಭ್ಯರ್ಥಿಗಳು ಉಪಾಧ್ಯಾಯರ ಹುದ್ದೆಗೆ ಸಂದರ್ಶನಕ್ಕೆ ಹಾಜರಾಗಿದ್ದು ಕೆಲವು ಖಾಸಗಿ ಸದಸ್ಯರು ಕೆಲಸ ಕೊಡಿಸುವುದಕ್ಕಾಗಿ ೨ ರಿಂದ ೫ ಸಾವಿರ ರೂಪಾಯಿವರೆಗೂ ಹಣ ತೆಗೆದುಕೊಂಡಿದ್ದಾರೆ ಎಂದು ಗೊತ್ತಾಗಿದೆ. ಈಗ ಸರ್ಕಾರದವರು ಅಂಥ ಸದಸ್ಯರನ್ನು ತೆಗೆದರೆ ಹಣ ಕೊಟ್ಟವರಿಗೆ ಹಣವೂ ಇಲ್ಲ, ಕೆಲಸವೂ ಇಲ್ಲ-ಹೀಗಾಗುತ್ತದೆ. ಆದ್ದರಿಂದ ಯಾರು ದುಡ್ಡು ಕೊಟ್ಟಿದ್ದಾರೋ ಅಂಥ ಕಡೆಗಳಲ್ಲಿ ಆಯ್ಕೆಯಾಗುವವರೆಗಾದರೂ ಸದಸ್ಯರನ್ನು ತೆಗೆಯುವಂತೆ ಆದೇಶ ಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಅಂದರೆ ತಮ್ಮ ಅಭಿಪ್ರಾಯದಲ್ಲಿ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ಹೇಳುತ್ತಿದ್ದೀರಿ. ಅದು ಸಾಧ್ಯವಿಲ್ಲ ಯಾರಾದರೂ ಹಣ ಕೊಟ್ಟಿದ್ದರೆ ಅದು ಖಾಸಗೀ ವ್ಯವಹಾರ. ಸಮಿತಿ ಸದಸ್ಯರು ಮತ್ತು ಅಭ್ಯರ್ಥಿಗಳ ನಡುವೆ ನಡೆದ ಖಾಸಗೀ ವ್ಯವಹಾರಕ್ಕೆ ನಾವು ಹೊಣೆಯಲ್ಲ. ಅದನ್ನು ಸರ್ಕಾರ ಒಪ್ಪುವುದಿಲ್ಲ. ಯಾರು ಯಾರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂಬುದು ಕಂಡುಬಂದರೆ ಅಂಥ ಸದಸ್ಯರನ್ನು ನೇಮಕಾತಿ ಸಮಿತಿಗಳಲ್ಲಿ ಸದಸ್ಯರನ್ನಾಗಿ ಪುನಃ ನೇಮಿಸುವುದಿಲ್ಲ.

ಶ್ರೀ ವೆಂಕಟರಾಮಯ್ಯ.—ಹೊಸದಾಗಿ ನೇಮಕಾತಿ ಸಮಿತಿಗಳನ್ನು ರಚಿಸುವಾಗ ಸ್ಥಳೀಯ ವಿಧಾನಸಭಾ ಸದಸ್ಯರನ್ನು ಸದಸ್ಯರನ್ನಾಗಿ ನೇಮಿಸುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಇಂಥವರನ್ನೇ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಯೋಚನೆ ಮಾಡಿಲ್ಲ. ಖಾಸಗೀ ಸದಸ್ಯರು ಎಂದರೆ ವಿಧಾನ ಸಭಾಸದಸ್ಯರೂ ಆಗಬಹುದು, ಬೇರೆ ಯಾರಾದರೂ ಆಗಬಹುದು. ಒಟ್ಟಿನಲ್ಲಿ ಅರ್ಹರಾದವರು ಯಾರು ಎಂದು ವಿಚಾರ ಮಾಡಿ ನೇಮಕ ಮಾಡುತ್ತೇವೆ.

ಶ್ರೀ ಮಳ್ಳೂರು ಆನಂದರಾವ್.—ಜಿಲ್ಲಾ ಮಂಟ್ಪದ ನೇಮಕಾತಿ ಸಮಿತಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆನ್ನುವುದು ಎಲ್ಲರಿಗೂ ಗೊತ್ತಿದೆ. ಬರೀ ಖಾಸಗಿ ಸದಸ್ಯರೇ ಅಲ್ಲ, ಅಧಿಕಾರಿಗಳೂ ಸಹ ೩-೪ ಸಾವಿರ ರೂಪಾಯಿಗಳ ಲಂಚ ತೆಗೆದುಕೊಂಡಿರುವುದನ್ನು ಆಧಾರಸಹಿತ ಈ ಸಭೆಯಲ್ಲಿ ಪ್ರಸ್ತಾಪ ಮಾಡಲಾಗಿದೆ. ಈಗ ಮೂಲ ಪದ್ಧತಿಯಲ್ಲೇ ದೋಷವಿರುವುದರಿಂದ ಒಂದು ವೇಳೆ ಸಮಿತಿಯನ್ನು ಪುನರ್‌ರಚನೆ ಮಾಡಿದರೂ ಭ್ರಷ್ಟಾಚಾರ ಹೊಸದಾಗಿ ಪ್ರಾರಂಭವಾಗುತ್ತದೆ, ಅಷ್ಟೆ. ಆದುದರಿಂದ, ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವುದಕ್ಕೆ ಅನ್ಯ ಮಾರ್ಗ ಹುಡುಕಬೇಕು. ಸದ್ಯಕ್ಕೆ ಭ್ರಷ್ಟಾಚಾರವನ್ನು ಕೊನೆಗಾಣಿಸಲು ಜಿಲ್ಲಾ ಮಂಟ್ಪದ ನೇಮಕಾತಿ ಸಮಿತಿಗಳನ್ನು ರದ್ದು ಮಾಡಬೇಕು.

ಶ್ರೀ ಜಿ.ಬಿ. ಶಂಕರರಾವ್.—ಮತ್ತೆ ಶಿಕ್ಷಕರನ್ನು ಯಾರು ನೇಮಕ ಮಾಡಬೇಕು ?

ಶ್ರೀ ಮಳ್ಳೂರು ಆನಂದರಾವ್.—ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುವುದಾದರೆ ಸಮ್ಮನ್ನೆಲ್ಲ ಕರೆಸಿ ; ನಾವು ಸಲಹೆ ಕೊಡುತ್ತೇವೆ. ಇದನ್ನು ಸಮಗ್ರವಾಗಿ ಪರಿಶೀಲನೆ ಮಾಡುವ ಅಗತ್ಯವಿದೆ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ತಮ್ಮ ಸಲಹೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಸಮಸ್ಯೆಯನ್ನು ಸಮಗ್ರವಾಗಿ ಪರಿಶೀಲನೆ ಮಾಡುವ ಕಾಲಕ್ಕೆ ಅವರ ಸಲಹೆಯನ್ನು ಗಮನದಲ್ಲಿಟ್ಟಿ ಕೊಂಡು ನೇಮಕಾತಿ ಸಮಿತಿಗಳನ್ನು ರಚಿಸಲಾಗುವುದು.

ಶ್ರೀ ವಿ. ಎಂ. ಘಾಡಿ.—ನೇಮಕಾತಿ ಸಮಿತಿಗಳಲ್ಲಿ ಒಟ್ಟು ನೂರು ಅಂಕಗಳಿದ್ದು, ಅದರಲ್ಲಿ ಐವತ್ತು ಅಂಕಗಳನ್ನು ಎಸ್.ಎಸ್.ಎಲ್.ಸಿ. ಮತ್ತು ಟಿ.ಸಿ.ಎಚ್. ವಿದ್ಯಾರ್ಹತೆಗೂ ಮತ್ತುಳಿದ ಐವತ್ತು ಅಂಕ ಗಳನ್ನು ಮೌಖಿಕ ಪರೀಕ್ಷೆಗೂ ಇಟ್ಟಿರುತ್ತಾರೆ. ಮೀಸಲಾತಿಯನ್ನು ಗಮನದಲ್ಲಿಟ್ಟುಕೊಂಡು, ಮೌಖಿಕ ಪರೀಕ್ಷೆಯನ್ನು ಡಿ.ಡಿ.ಪಿ.ಐ. ಅವರೊಬ್ಬರೇ ಮಾಡುವ ಹಾಗೆ ಯೋಚನೆ ಮಾಡಲಾಗುವುದೆ ?

ಶ್ರೀ ಜಿ. ಬಿ. ಶಂಕರರಾವ್.—ನೇಮಕಾತಿ ಸಮಿತಿಗಳಲ್ಲಿ ಅಧಿಕಾರೇತರರನ್ನು ವಜಾ ಮಾಡಿ, ಎಲ್ಲ ಸನ್ನೂ ಅಧಿಕಾರಿಗಳಿಗೆ ಬಿಡಿ ಎಂದು ಕೆಲವರು ಹೇಳುತ್ತಿದ್ದಾರೆ. ಮತ್ತೆ ಕೆಲವರು ಇನ್ನೂ ಅನೇಕ ಸಲಹೆ ಗಳನ್ನು ಕೊಟ್ಟಿದ್ದಾರೆ. ಈ ಎಲ್ಲ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ಚೌಡಯ್ಯ.—ಮೊದಲು ಈ ಸಮಿತಿಗಳಲ್ಲಿ ಅಧಿಕಾರಿಗಳು ಮಾತ್ರ ಇದ್ದರು ; ಆಮೇಲೆ ಅಧಿಕಾರೇತರ ಸದಸ್ಯರನ್ನೂ ಸೇರಿಸಿ ರಚನೆ ಮಾಡಲಾಯಿತು. ಸರ್ಕಾರದ ಮಟ್ಟದಲ್ಲಿ ಯಾವುದೇ ನೇಮಕಾತಿ ಸಮಿತಿ ಇರಲಿ–ಕಳೆದ ಎರಡು ವರ್ಷಗಳಿಂದ ನೇಮಕಾತಿಗಳು ನಿಂತುಹೋಗಿವೆ. ಇದರಿಂದಾಗಿ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರಿಲ್ಲದೆ ದೊಡ್ಡ ಸಮಸ್ಯೆಯಾಗಿದೆ. ನಿವೃತ್ತರಾದ ಉಪಾಧ್ಯಾಯರ ಖಾಲಿ ಬಿದ್ದ ಹುದ್ದೆಗಳಿಗೆ ಇನ್ನೂ ನೇಮಕಗಳನ್ನು ಮಾಡಿಲ್ಲ. ಹೀಗೆ ನೇಮಕಗಳನ್ನು ಮಾಡದೇ ಇರುವುದ ರಿಂದ, ಮೀಸಲಾತಿ ಇರುವ ವರ್ಗಗಳಿಗೆ ಅವಕಾಶಗಳು ತಪ್ಪಿಹೋಗಿವೆ. ಮತ್ತು ಇದರಿಂದ ನಿರುದ್ಯೋಗ ಸಮಸ್ಯೆ ಇನ್ನಷ್ಟು ಹೆಚ್ಚಿದಂತಾಗುತ್ತದೆ. ಆದುದರಿಂದ, ಇದಕ್ಕೆ ಪರಿಹಾರ ಕಂಡುಹಿಡಿದು ಆದಷ್ಟು ಶೀಘ್ರವಾಗಿ ನೇಮಕಗಳನ್ನು ಮಾಡುವಿರಾ ?

ಶ್ರೀ ಜಿ. ಬಿ. ಶಂಕರ ರಾವ್.—ಈಗಾಗಲೇ ನಾನು ಹೇಳಿದ್ದೇನೆ. ಇದು ಒಂದು ಜಿಲ್ಲೆಗೆ ಸಂಬಂಧ ಪಟ್ಟದ್ದಲ್ಲ ; ಎಲ್ಲ ಜಿಲ್ಲೆಯಲ್ಲೂ ಶಿಕ್ಷಕರ ಕೊರತೆ ಇದೆ. ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಹೊತ್ತಿಗೆ ನೇಮಕಾತಿ ಸಮಿತಿಗಳನ್ನು ಪುನರ್ರಚಿಸಿ ನೇಮಕಗಳನ್ನು ಮಾಡಿಕೊಳ್ಳುವುದಕ್ಕೆ ಆದೇಶ ಕೊಡುತ್ತೇನೆಂದು ಹೇಳಿದ್ದೇನೆ. ನೇಮಕಾತಿಯನ್ನು ಜಾಗ್ರತೆ ಮಾಡದಿರುವುದರಿಂದ ಹರಿಜನರಿಗೆ ಮೀಸಲಾತಿ ಹುದ್ದೆಗಳು ಸಿಗುವುದಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಘಟನಾವಳಿ ಪ್ರಕಾರ ಕೇಡಾವಾರು ಕ್ರಮವನ್ನು ಅನುಸರಿಸಿಕೊಂಡು ಹೋಗುವಂತೆ ನೇಮಕಾತಿ ಸಮಿತಿಗಳಿಗೆ ಸರ್ಕಾರ ಆದೇಶ ಕೊಡುತ್ತದೆ.

SRI PRABHAKAR TELKAR.—It has been observed for the last one year, the schools are not running properly for want of teachers. The Government is re-constituting D.L.R C. again with able and good members on it. It is not possible to find out a person who is not corrupt. If the Government is followig the some thing it will take its own time. Again, there will be scarcity for teachers next year also ; and we will be in a difficult situation. Will the Government find out a way by which we can have teachers for smooth running of schools so that the students will continue their studies in a better manner.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರೆಲ್ಲರ ಕಳಕಳಿಯನ್ನು ಸರ್ಕಾರ ಅರ್ಥ ಮಾಡಿ ಕೊಂಡಿದೆ. ಈ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮುನ್ನ ಎಲ್ಲವನ್ನೂ ಸರಿಪಡಿಸುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ.